ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-1**

**ಸಂಖ್ಯೆ:ಸಿ1(4)ಗ್ರೂಪ್-ಬಿ/ಸೇವಾ ವಿವರ/11/2017-18** **ದಿನಾಂಕ:16-08-2017.**

**-:ಸುತ್ತೋಲೆ:-**

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ಸೇವಾ ಮಾಹಿತಿಯನ್ನು teacher's data capture software ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ.

ಉಲ್ಲೇಖ:ಈ ಕಛೇರಿಯ ಸುತ್ತೋಲೆ ಸಂಖ್ಯೆ:ಇ-ಆಡಳಿತ ಶಿಕ್ಷಕರ ಮಾಹಿತಿ 01-2017-18 ದಿನಾಂಕ:17-07-2017.

**&&&&**

ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರು/ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳ ಸೇವಾ ಮಾಹಿತಿಯನ್ನು ದಿನಾಂಕ:22-07-2017ರೊಳಗೆ teacher's data capture software ತಂತ್ರಾಂಶದಲ್ಲಿ ಅಳವಡಿಸುವಂತೆ ಉಲ್ಲೇಖದ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಆದರೆ ಇದುವರೆವಿಗೂ ಯಾವುದೇ ಕಛೇರಿಯಿಂದಲೂ ಪೂರ್ಣ ಪ್ರಮಾಣದ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಿರುವುದಿಲ್ಲ. ಈ ವಿಷಯವನ್ನು ಮಾನ್ಯ ಆಯುಕ್ತರು ಗಂಭೀರವಾಗಿ ಪರಿಗಣಿಸಿರುತ್ತಾರೆ. ಪ್ರಯುಕ್ತ ವಿಳಂಭಕ್ಕೆ ಆಸ್ಪದವಿಲ್ಲದೆ ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರು/ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳ ಸೇವಾ ಮಾಹಿತಿಯನ್ನು ತಂತ್ರಾಂಶದಲ್ಲಿ ನಮೂದಿಸಲು ತಿಳಿಸಿದೆ.

ಈ ವಿಷಯವನ್ನು ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಉಪನಿರ್ದೇಶರು, ಪ್ರಾಂಶುಪಾಲರು, ಹಾಗೂ ಕಛೇರಿಯ ಮುಖ್ಯಸ್ಥರು ವೈಯುಕ್ತಿಕ ಗಮನಹರಿಸಿ ಈ ಕೆಲಸವನ್ನು ಆದ್ಯತೆಯಮೇರೆಗೆ ಪೂರ್ಣಗೊಳಿಸುವುದು. ತಪ್ಪಿದಲ್ಲಿ 2017-18ನೇ ಸಾಲಿನ ಸಾಮಾನ್ಯ ವರ್ಗಾವಣಾ ಸಮಯದಲ್ಲಿ ಉಂಟಾಗುವ ತೊಂದರೆಗಳಿಗೆ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

[ಎಸ್.ಕಾತ್ಯಾಯನಿದೇವಿ]
ಜಂಟಿ ನಿರ್ದೇಶಕರು[ಆಡಳಿತ]

16/8/17 17/8/17

**ಇವರಿಗೆ:**

1. ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ ಮತ್ತು ಆರ್.ಎಂ.ಎಸ್.ಎ, ಬೆಂಗಳೂರು.
2. ನಿರ್ದೇಶಕರು(ಪರೀಕ್ಷೆಗಳು), (ಡಿ.ಎಸ್.ಇ.ಆರ್.ಟಿ.), (ಅಲ್ಪಸಂಖ್ಯಾತ ಭಾಷೆಗಳು), (ಎಸ್.ಎಸ್.ಎ), (ಆರ್.ಎಂ.ಎಸ್.ಎ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು, ಬೆಂಗಳೂರು ವಿಭಾಗಗಳು.
4. ಸಹನಿರ್ದೇಶಕರು, (ಟಿ.ಬಿ.ಎಫ್), (ಮಧ್ಯಾಹ್ನ ಉಪಹಾರ ಯೋಜನೆ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
6. ರಾಜ್ಯದ ಎಲ್ಲಾ ಪ್ರಾಂಶುಪಾಲರು[ಅಭಿವೃದ್ಧಿ] ಡಯಟ್, ಸಾರ್ವಜನಿಕ ಶಿಕ್ಷಣ ಇಲಾಖೆ.
7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.
8. ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳಿಗೆ.